ಡಾ॥ ಜೀವರಾಜ ಆಳ್ವ : ತಾವು ಸ್ವಲ್ಪ ನಗಬೇಕು.

ಅಧ್ಯಕ್ಷರು : ಯಾರಾದರೂ ನನ್ನನ್ನು ಕ್ಷಮೆ ಕೇಳಬೇಕು ಎಂದು ನಾನು ಬಯಸುವುದಿಲ್ಲ. ಅಷ್ಟು ನಾನು ದೊಡ್ಡವನೂ ಅಲ್ಲ. ನಾನು ಈ ಸದನದ ಒಳಗಡೆ ಬರುವುದಕ್ಕೆ ಬಹಳ ಪ್ರಯತ್ನಪಟ್ಟು ಬಂದಿದ್ದೇನೆ. ಇದನ್ನೇ ಒಂದು ದೊಡ್ಡ ಪುಣ್ಯ ಎಂದು ತಿಳಿದುಕೊಂಡಿದ್ದೇನೆ. ಪ್ರತಿಯೊಬ್ಬರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಾಧ್ಯವಾದಷ್ಟು ಮಟ್ಟಿಗೆ ನಿಮ್ಮೆಲ್ಲರರನ್ನೂ ನಾನು ವಿಶ್ವಾಸಕ್ಕೆ ತೆಗೆದು ಕೊಂಡು ಕೆಲಸ ಮಾಡುತ್ತಿದ್ದೇನೆ. ಯಾವುದೇ ಈ ಸಮಸ್ಯೆ ಇರಲಿ, ಅದಕ್ಕೆ ನಿಯಮಾವಳಿಗಳಲ್ಲಿ ಅವಕಾಶ ಕಲ್ಪಿಸಿಕೊಂಡು ಎಲ್ಲರನ್ನೂ ಹೊಂದಿಸಿಕೊಂಡು ಹೋಗಬೇಕು. ಅವರಿಗೆ ನಾನು ಅದನ್ನೇ ಹೇಳಿದೆ. ಜೀರೊ ಅವರ್‌ನಲ್ಲಿ ಪ್ರಸ್ತಾಪ ಮಾಡಬೇಕಾಗಿದ್ದರೂ ಸಹಾ ಅದನ್ನು ಪ್ರಾರಂಭವಾಗುವ ಮೊದಲೇ ಬಂದು ಒಂದು ಸೂಚನೆ ಕೊಟ್ಟಿದ್ದರೆ ನಾನು ಅವಕಾಶವನ್ನು ಮಾಡಿ ಕೊಡುತ್ತಿದ್ದೆ. ಮೊದಲೇ ಬಂದು ಮಾತನಾಡಿ ಹೇಳಿದವರ ಒಂದು ಪಟ್ಟಿಯನ್ನು ಮಾಡಿ ಕೊಂಡು ಅದರ ಪ್ರಕಾರ ಒಂದೊಂದಾಗಿ ನಿಮ್ಮನ್ನು ಕರೆಯುತ್ತಿದ್ದೇವೆ. ಇಷ್ಟರ ಮಧ್ಯೆ ಏಕೋ ಅವರು ಆವೇಶಪಟ್ಟರು. ನಾನು ಬಹಳ ಸಾಮಾನ್ಯ ಕುಟುಂಬದಿಂದ ಬಂದವನು ಎಂದು ಮೊದಲ ದಿವಸ ಈ ಸ್ಥಾನದಲ್ಲಿ ಕುಳಿತಾಗಲೇ ನಾನು ಹೇಳಿದೆ. ಇದರಲ್ಲಿ ನನ್ನದೊಡ್ಡಸ್ತಿಕೆ ಪ್ರಶ್ನೆ ಏನೂ ಇಲ್ಲಿ ಇಲ್ಲ. ಹಿಂದಿನವರು ಬಹಳ ಶ್ರಮಪಟ್ಟು ಇದರ ಗೌರವವನ್ನು ಪಾಲಿಸಿಕೊಂಡು ಪರಂಪರೆ ಹಾಕಿಕೊಂಡು ಬಂದಿದ್ದಾರೆ. ಅದಕ್ಕೆ ನಾನು ಇದ್ದಾಗ ಚ್ಯುತಿ ಬರಬಾರದು ಎಂದು ನನ್ನ ಆಸೆ. ಇದರ ಗೌರವವನ್ನು ಇನ್ನಷ್ಟು ಹೆಚ್ಚಿಸುವುದಕ್ಕೆ ಯೋಗ್ಯತೆ ಇದೆ ಎಂದು ನಾನು ಅಂದುಕೊಂಡಿಲ್ಲ. ನನ್ನ ಕಾಲದಲ್ಲಿ ಗೌರವ ಕಡಿಮೆಯಾಗುವುದಕ್ಕೆ ಎಂದೂ ನಾನು ಭಾಗಿಯಾಗಬಾರದು ಎಂದು ಅಷ್ಟೇ ನನ್ನಉದ್ದೇಶ. ಮಾನ್ಯ ಸಗೀರ್ ಅಹಮದ್‌ರವರೇ ತಾವು ಪ್ರಾರಂಭ ಮಾಡಿ.

ವಿಷಯ : ಚಿಕ್ಕಮಂಗಳೂರಿನಲ್ಲಿ 7.3.95 ರಂದು ನಡೆದ ಕೊಲೆಪ್ರಕರಣವನ್ನು ಸಿ.ಬಿ.ಐ ಗೆ ಒಪ್ಪಿಸುವ ಬಗ್ಗೆ .

ಶ್ರೀ ಸಿ.ಆರ್. ಸಗೀರ್ ಅಹಮದ್ : (ಚಿಕ್ಕಮಗಳೂರು) ಮಾನ್ಯ ಅಧ್ಯಕ್ಷರೇ, ನಡೆದಂಥ ಒಂದು ಘಟನೆಯ ಬಗ್ಗೆಯೂ ಸಹಾ ನನಗೂ ಬಹಳಷ್ಟು ನೋವಾಯಿತು. ಇವತ್ತು ನಮ್ಮ ನಾಯಕರಾದಂಥ ಖಿರ್ಗಿಯವರು ಆಗಲೇ ವಿಷಾದವನ್ನು ವ್ಯಕ್ತಪಡಿಸುವುದರ ಜೊತೆಗೆ ತಮ್ಮ ಒಂದು ಸೌಜನ್ಯತೆಯ ಬಗ್ಗೆ ಇವನಿಗೆ ಬಹಳ ಸಂತೋಷವಾಗುತ್ತಿದೆ. ಹಾಗೂ ತಮ್ಮ ಕೊಠಡಿಗೆ ಬಂದಂಥ ಸಂದರ್ಭದಲ್ಲಿ ಅವರಿಗೆ ಗೌರವವನ್ನು ಕೊಟ್ಟು ಅವರ ಸಮಸ್ಯೆಗಳನ್ನು ಅರಿವು ಮಾಡಿ ಕೊಂಡು ಸದನದಲ್ಲಿ ಮಾತನಾಡುವುದರ ಬಗ್ಗೆ ಹಾಗೂ ನಮ್ಮ ಹಕ್ಕನ್ನು ಕೊಡಿಸುವ ಬಗ್ಗೆ ತಾವು ಬಹಳ ಕಾಳಜಿಯನ್ನು ವಹಿಸಿ ಪಕ್ಷಪಾತ ಮರೆತು ಸದಸ್ಯರಿಗೆ ಗೌರವ ತರುವ ಅವಕಾಶವನ್ನು

ತಾವು ಹಾಕಿಕೊಡುತ್ತಿದ್ದೀರಿ, ಅದಕ್ಕಾಗಿ ಈ ಸದನದ ಗೌರವಾನ್ವಿತ ಸದಸ್ಯರಾದ ನಾವು ತಮ್ಮನ್ನು ಅಭಿನಂದಿಸಬೇಕು. ಈ ಘಟನೆ ಬಗ್ಗೆ ನಾನೂ ಸಹ ನಮ್ಮ ಪಕ್ಷದ ಪರವಾಗಿ ವಿಷಾದವನ್ನು ವ್ಯಕ್ತಪಡಿಸುತ್ತೇನೆ. ನಾನು ಮಾನ್ಯ ಗೃಹಸಚಿವರ ಗಮನಕ್ಕೆ ತರುವ ವಿಷಯವೇನೆಂದರೆ ಚಿಕ್ಕಮಗಳೂರು ಪಟ್ಟಣದಲ್ಲಿ ದಿನಾಂಕ : 7-3-95ರಂದು 12-30 ಗಂಟೆ ಸಮಯದಲ್ಲಿ ಒಬ್ಬಳು ಹೆಣ್ಣುಮಗಳು ಮನೆಯಲ್ಲಿದ್ದಂಥ ಸಂದರ್ಭದಲ್ಲಿ ಕೊಲೆಯಾಗಿದೆ. ಯಾರೂ ಇದುವರೆಗೂ ಕಂಡುಹಿಡಿಯಲಾರದಂಥ ಕೊಲೆಯನ್ನು ಮಾಡಿ ಒಂದು ತಿಂಗಳು ಕಾಲಮುಗಿದಿದೆ. ಆ ವೈದ್ಯರ ಪತ್ನಿಯಾದ ಅರುಣಾ ಎಂಬ ಮಹಿಳೆ ಮನೆಯಲ್ಲಿ ಒಬ್ಬಳೇ ಇದ್ದಂಥ ಸಂದರ್ಭದಲ್ಲಿ ಮೂರು ಜನ ಪೋಲೀಸ್‌ನವರ ಒಂದು ಮಾಹಿತಿ ಪ್ರಕಾರ ಮಾರುತಿ ವ್ಯಾನ್‌ನಲ್ಲಿ ಬಂದಿದ್ದ ಎಂದು ಒಂದು ಮಾಹಿತಿ ಕೊಟ್ಟರೆ ಇನ್ನೊಂದು ಕಡೆ ಮಾಹಿತಿ ಮೋಟಾರ್ ಸೈಕಲ್‌ನಲ್ಲಿ ಬಂದಿದ್ದರು ಎನ್ನುವ ಅಭಿಪ್ರಾಯವನ್ನು ಅವರು ಕೊಡುತ್ತಿದ್ದಾರೆ. ಆದರೆ ಇವರಕೊಲೆ 12-40 ನಿಮಿಷಕ್ಕೆ ಆಗುವಂಥ ಸಂದರ್ಭದಲ್ಲಿ ಅವರ ಮೈಮೇಲೆ ಇದ್ದಂಥ ಒಡವೆಗಳನ್ನು ಸಹಾ ದೋಚಿಕೊಂಡು ಹೋಗಿರುವ ವಿಚಾರ ಆಗಲೇ ಸಾರ್ವಜನಿಕರ ಗಮನಕ್ಕೆ ಬಂದಿದೆ. ನಾನು ಇವತ್ತು ಈ ಶೂನ್ಯವೇಳೆಯಲ್ಲಿ ಈ ವಿಚಾರವನ್ನು ಎತ್ತುವಂಥದ್ದು ಮತ್ತು ತಮ್ಮ ಮುಖಾಂತರವಾಗಿ ಸರ್ಕಾರದ ಗಮನಕ್ಕೆ ತರುವುದು ಎಂದರೆ ಇಲ್ಲಿಯವರೆಗೆ ಈ ಕೊಲೆಗಾರರು ಯಾರು ಎನ್ನುವುದರ ಬಗ್ಗೆ ಪತ್ತೆ ಹೆಚ್ಚುವುದಕ್ಕೆ ಸಾಧ್ಯವಾಗಿಲ್ಲ. ಆದರೆ ಕಾರಣ ಏನೆಂದರೆ ಚಿಕ್ಕಮಗಳೂರು ಪಟ್ಟಣದಲ್ಲಿ ರಾಜಕೀಯ ಪ್ರಭಾವವನ್ನು ಪೋಲೀಸ್‌ನವರೇ ಬೀರುತ್ತಿದ್ದಾರೆ ಎಂದು ಒಂದು ಅಭಿಪ್ರಾಯ ಚಿಕ್ಕಮಗಳೂರು ಪಟ್ಟಣದ ನಾಗರೀಕರಲ್ಲಿ ಉಂಟಾಗಿದೆ. ಇದರ ಜೊತೆಗೆ ನಾಗರೀಕರಲ್ಲಿ ಬಹಳಷ್ಟು ಭಯಭೀತಿ ಉಂಟಾಗಿದೆ. ಕಾರಣ ಏನೆಂದರೆ, ಈ ಪಟ್ಟಣದಲ್ಲಿ ಈ ರೀತಿ ಹಗಲುದರೋಡೆ ಹಾಗೂ ಹಗಲು ಸಮಯದಲ್ಲಿ ಒಂದು ಕೊಲೆಯಾಗುತ್ತಿದೆ ಎಂದರೆ ಈ ಹಿಂದೆಯೂ ಸಹಾ ಆ ಭಾಗದಲ್ಲಿ ಆ ಜಾಗದಲ್ಲಿ ಒಂದುಕೊಲೆಯಾಗಿದೆ. ಆದರೆ ಆ ಕೊಲೆಯಾದ ನಂತರ ಅಪರಾಧಿಗಳನ್ನು ಪತ್ತೆ ಹಚ್ಚಿ ಅವರ ಮೇಲೆ ಮೊಕದ್ದಮೆ ಮಾಡಿದ ನಂತರ ನ್ಯಾಯಾಲಯದಲ್ಲೂ ಸಹಾ ಅವರನ್ನು ಬಿಡುಗಡೆ ಮಾಡಲಾಗಿದೆ. ಆದ್ದರಿಂದ ಸಾರ್ವಜನಿಕರಲ್ಲಿ ಭಯ ಉಂಟಾಗಿರುವುದರಿಂದ ತಮ್ಮ ಮುಖಾಂತರವಾಗಿ ಮಾನ್ಯ ಗೃಹಸಚಿವರಲ್ಲಿ ಹಾಗೂ ಸರ್ಕಾರದಲ್ಲಿ ನನ್ನ ಮನವಿ ಏನೆಂದರೆ ಈ ಪ್ರಕರಣವನ್ನು ಸಿ.ಓ.ಡಿ.ಗೆ ತಾವು ಒಪ್ಪಿಸುತ್ತೀರಿ ಎಂದು ಹೇಗಿದ್ದರೂ ತಾವು ಈ ಸದನದಲ್ಲಿ ಉತ್ತರವನ್ನು ನೀಡುತ್ತೀರಿ ಎಂದು ಹೇಳಿ ನಾನಂತೂ ಭಾವಿಸಿದ್ದೇನೆ.. ಆದರೆ ನನ್ನ ಒಂದು ಪ್ರಯತ್ನ ತಮ್ಮ ಮುಖಾಂತರ ಸರ್ಕಾರಕ್ಕೆ ತಾವು ದಯಮಾಡಿ ಈ ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ತಮ್ಮ ಮುಖಾಂತರವಾಗಿ ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ಈ ಒಂದು ಶೂನ್ಯವೇಳೆಯಲ್ಲಿ ಅವಕಾಶವನ್ನು

ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ(ಗೃಹ ಸಚಿವರು) : ಮಾನ್ಯ ಸಭಾದ್ಯಕ್ಷರೇ 7-3-95 ರಂದು ಶ್ರೀಮತಿ ಅರುಣಾ ಅವರ ಕೊಲೆಯ ಬಗ್ಗೆ ಮಾನ್ಯ ಸಗೀರ್ ಅಹಮದ್‌ರವರು ಈಗಾಗಲೇ ಸರ್ಕಾರದ ಗಮನಕ್ಕೆ, ನನ್ನ ಗಮನಕ್ಕೆ ವಿಚಾರವನ್ನು ತಂದಿದ್ದಾರೆ. ನಮ್ಮ ಸಚಿವರಾಗಿರುವ ಮಾನ್ಯ ಗೋವಿಂದೇ ಗೌಡರು ಸುಮಾರು 15 ದಿನಗಳ ಹಿಂದೆ ಇದರ ಬಗ್ಗೆ ನನಗೆ ಒಂದು ಪತ್ರವನ್ನು ಬರೆದಿದ್ದಾರೆ. ಚಿಕ್ಕಮಗಳೂರಿನ ಅನೇಕ ನಾಗರೀಕರು ಸಹಾ ನನ್ನನ್ನು ಬಂದು ಭೇಟಿ ಮಾಡಿದ್ದಾರೆ. ವಿಷಯದ ಗಂಭೀರತೆಯನ್ನು ತಿಳಿದು ನಾನು ಈಗಾಗಲೇ ಈ ಒಂದು ಪ್ರಕರಣವನ್ನು ಸಿಓಡಿ ಗೆ ಕೊಟ್ಟಿದ್ದೇನೆ. ಸಿ.ಓ.ಡಿ ಪೋಲೀಸ್‌ನವರು ತನಿಖೆಯನ್ನು ಮಾಡಿ ಒಂದು ಪ್ರಥಮ ವರದಿಯನ್ನು ಈಗಾಗಲೇ ಕೊಟ್ಟಿದ್ದಾರೆ. ಅದರ ಪ್ರಕಾರವಾಗಿ ಈ ಒಂದು ಹತ್ಯೆಯನ್ನು, ಕೊಲೆಯನ್ನು ಮಾಡಿರತಕ್ಕವರನ್ನು ಬಂಧಿಸುವುದಕ್ಕೆ ಕೆಲವು ಸುಳಿವು ಸಿಕ್ಕಿದೆ. ಆದರಿಂದ ನನಗೆ ಅನಿಸುತ್ತದೆ ಇದನ್ನು ಸಿಬಿಐಗೆ ಕೊಡತಕ್ಕ ಅವಶ್ಯಕತೆ ಇಲ್ಲ. ವಿಷಯದ ಗಂಭೀರತೆ ಸರ್ಕಾರಕ್ಕೆ ಅರಿವಾಗಿದ್ದುಕೊಂಡು ಈಗಾಗಲೇ ಸಿಓಡಿ ಅವರಿಗೆ ಕೊಟ್ಟಿದ್ದೇವೆ. ಸಿಓಡಿ ಮುಖ್ಯಸ್ಥರು ಒಂದೆರಡು ದಿನಗಳಲ್ಲಿ ಚಿಕ್ಕಮಗಳೂರಿಗೆ ಭೇಟಿಯನ್ನು ಕೊಟ್ಟು ಸ್ವತಃ ಈ ಒಂದು ಕೊಲೆ ಮಾಡಿರತಕ್ಕ ಜನಗಳನ್ನು ಪತ್ತೆ ಮಾಡಲಿಕ್ಕೆ ಎಲ್ಲಾ ಕ್ರಮವನ್ನು ಸಹ ತೆಗೆದುಕೊಂಡಿದ್ದಾರೆ. ಯಾರೂ ಸಹ ಭಯಬೀತರಾಗಿರತಕ್ಕ ಅವಶ್ಯಕತೆ ಇಲ್ಲ. ಚಿಕ್ಕಮಗಳೂರಿನಲ್ಲಿ ಈ ವರ್ಷ ಆಗಿರತಕ್ಕ ಕೊಲೆಗಳಲ್ಲಿ ಎರಡು ಮಾತ್ರ ಪತ್ತೆ ಆಗದೇ ಇರತಕ್ಕದ್ದು. ಒಂದು ಡಾ:ಅವರ ಪತ್ನಿ ದಿ:ಅರುಣಾ ಅವರು, ಮತ್ತೊಂದು ಕೊಲೆ ಬಗ್ಗೆ ಮಾನ್ಯ ಸಗೀರ್ ಅಹಮದ್ ಅವರು ಹೇಳಿದ್ದಾರೆ. ನಾನು ಇದರ ಬಗ್ಗೆ ಅವರೊಂದಿಗೆ ಸುಮಾರು ವಾರದ ಹಿಂದೆ ಮಾತನಾಡಿದ್ದೇನೆ. ನಾವು ಮಾತನಾಡಿದ ತಕ್ಷಣ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಮಾತನಾಡಿದ್ದೇನೆ. ಜಿಲ್ಲಾಧಿಕಾರಿಗಳ ಜೊತೆ ಮಾತನಾಡಿದ್ದೇನೆ. ಸಂಬಂಧಪಟ್ಟ ಎಲ್ಲಾ ವಿವರಗಳನ್ನು ಸಹಿತ ನಾನು ಸ್ವತ: ನೋಡಿದ್ದೇನೆ. ತಾವಾಗಲೀ ಅಥವಾ ಚಿಕ್ಕಮಗಳೂರಿನ ಜನತೆಯಾಗಲೀ ಇದರ ಬಗ್ಗೆ ಭಯಬೀತರಾಗತಕ್ಕ ಅವಶ್ಯಕತೆ ಇಲ್ಲ. ನಮ್ಮ ಸಿಓಡಿ ಪೋಲೀಸರು ಆದಷ್ಟು ಬೇಗ ತನಿಖೆ ಮಾಡುತ್ತಾರೆ, ಯಶಸ್ವಿಯಾಗುತ್ತಾರೆಂದು ನಾನು ತಿಳಿದುಕೊಂಡು ಉಳಿದಿರತಕ್ಕ ರಕ್ಷಣೆ ಏನು ಬೇಕು ಮತ್ತು ಬಾಕಿ ವಿಚಾರ ಏನು ಇದೆ, ಕಾನೂನಿನ ಸಂರಕ್ಷಣೆ ದೃಷ್ಟಿಯಿಂದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳತಕ್ಕ ಭರವಸೆಯನ್ನು ಈ ಸಂದರ್ಭದಲ್ಲಿ ಗೌರವಾನ್ವಿತ ಸದಸ್ಯರಿಗೆ ನಾನು ತಮ್ಮ ಮೂಲಕ ಕೊಡುತ್ತೇನೆ.